ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly, KOPPA - CHM. ಫೋನ್ : 114

8ನೇ ವರ್ಷ 7ನೇ ಸಂಚಿಕೆ ಕೊಪ್ಪ 1-10-1989 ಭಾನುವಾರ ಬೆಲೆ 60 ಪೈಸೆ

ಕೆ. ಎಸ್. ಎಫ್. ಸಿ. ಆರ್ಥಿಕ ಸೌಲಭ್ಯ ಬಳಸಿಕೊಂ

ಕೈಗಾರಿಕೆ ಸ್ಥಾಪಿಸಲು ಯುವ ಜನರಿಗೆ ಕರೆ

ಕೊಪ್ಪ: ನಿರುದ್ಯೋಗ ತಾಂಡವವಾಡುತ್ತಿರುವ ಈ ದಿನಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ರಾಜ್ಯ ಹಣಕಾಸು ಸಂಸ್ಥೆ (ಕೆ.ಎಸ್.ಎಫ್.ಸಿ.) ನೀಡುತ್ತಿರುವ ಹಣಕಾಸಿನ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಲು ಯುವಜನರು ಮುಂದಾಗಬೇಕೆಂದು ಸಂಸ್ಥೆಯ ಮೈಸೂರು ವಲಯ ಉಪ ಪ್ರಧಾನ ವ್ಯವಸ್ಥಾಪಕ ಡಿ.ಎಸ್. ಆನಂದ್ ಕರೆ ಕೊಟ್ಟರು.

ಕೊಪ್ಪ, ಶೃಂಗೇರಿ, ನ.ರಾ. ಪುರ ಪ್ರದೇಶದಲ್ಲಿ ವಿವಿಧ ರೀತಿಯ ಕಚ್ಚಾ ಪದಾರ್ಥಗಳು ಯಥೇಚ್ಛವಾಗಿ ಲಭ್ಯವಿದ್ದರೂ ಇಲ್ಲಿನ ಜನರಲ್ಲಿ ಉದ್ಯಮಶೀಲತೆಯ ಕೊರತೆಯಿಂದ ಅವುಗಳ ಸಮರ್ಪಕ ಬಳಕೆಯಾಗುತ್ತಿಲ್ಲ ಎಂದು ವಿಷಾದಿಸಿದ ಅವರು, ಕೃಷಿ ಆಧಾರಿತ ಕೈಗಾರಿಕೆಗಳಿಗೂ ಹಾಗೆಯೇ, ಸರಿಷ್ಟ ಕಾಂತ್ರಿಕತೆ ಅಡಕವಾಗಿರುವ ಎಲೆಕ್ಟ್ರಾನಿಕ್ಸ್ ಉದ್ಯಮಕ್ಕೂ ಇಲ್ಲಿ ವಿಪುಲ ಅವಕಾಶಗಳಿದ್ದು, ಅಂಥವುಗಳನ್ನು ಸ್ಥಾಪಿಸಲು ಮುಂದಾಗಬೇಕೆಂದು ಅವರು ಹೇಳಿದರು. ಸಂಸ್ಥೆಯ ಹಣಕಾಸು ಸೌಲಭ್ಯಗಳ ಬಗೆಗೂ ಸ್ಥೂಲವಾಗಿ ವಿವರಿಸಿದರು.

ಕೊಪ್ಪ ಜೂನಿಯರ್ ಛೇಂಬರ್, ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಕೆ. ಎಸ್. ಎಫ್. ಸಿ. ಸಹಯೋಗದೊಂದಿಗೆ ಇಲ್ಲಿ ಸೆ. 23ರಂದು ಏರ್ಪಡಿಸಿದ್ದ ಕೈಗಾರಿಕಾ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾ ಕೈಗಾರಿಕಾ ಕೇಂದ್ರದ ಉಪ ನಿರ್ದೇಶಕ ಪ್ರಕಾಶ್ ಮಹಿಳೆಯರು ಮತ್ತು ಮಾಜಿ ಯೋಧರಿಗೆ ಮಂಡಲ ಮಟ್ಟದಲ್ಲಿ ಸಿಗುವ ಸೌಲತ್ತು, ರಿಯಾಯ್ತಿಗಳನ್ನು ವಿವರಿಸಿದರು.

ಬಾಳೆಹೊನ್ನೂರಿನ 'ವನಶ್ರೀ' ಉದ್ಯಮದ ಬಿ.ಎಸ್. ವಿದ್ಯಾನಂದ ಭಟ್ ತಮ್ಮ ಸಿಹಿ-ಕಹಿ ಅನುಭವಗಳನ್ನು ವಿವರಿಸಿ, ಸಾಹಸ ಶೀಲತೆ ಉದ್ಯಮದಲ್ಲಿ ಯಶಸ್ವಿಯಾಗಲು ಮುಖ್ಯವೆಂದರು.

ಎಂ. ಸೀತಾರಾಂ, ಎಸ್.ಜಿ. ಲಕ್ಷ್ಮೀಶ್, ಜಿ. ಮಲ್ಲಪ್ಪ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಜೇಸಿ ಅಧ್ಯಕ್ಷ ಶ್ರೀನಿವಾಸರಾವ್ ಸ್ವಾಗತಿಸಿ, ಪ್ರೀತಂ ಕುಮಾರ್ ವಂದಿಸಿದರು. ಶೃಂಗೇರಿ ಜೇಸಿ ಅಧ್ಯಕ್ಷ ಜಿ. ಎಂ. ಭಟ್ ಅವರೂ ಉಪಸ್ಥಿತರಿದ್ದರು.

ಸರ್ಕಾರಿ ಆಸ್ಪತ್ರೆ ಆಡಳಿತ ವಿಭಾಗ, ಕೃಷಿ ಇಲಾಖೆ ಕಟ್ಟಡಗಳ ಉದ್ಘಾಟನೆ :

'ಎಂ. ಡಿ.' ಸೋದರರಿಗೆ ಸ್ಮರಣೀಯ ಸನ್ಮಾನ

(ವರದಿ : ಕೆ.ಎನ್. ಶಿವಾನಂದ)

ಕೊಪ್ಪ : ಇಲ್ಲಿನ ದಿ॥ ಎಂ.ಎಸ್. ದೇವೇಗೌಡ ಸ್ಮಾರಕ ಸರ್ಕಾರಿ ಆಸ್ಪತ್ರೆಯ ಆಡಳಿತ ವಿಭಾಗ ಮತ್ತು ಕೃಷಿ ಇಲಾಖೆಯ ನೂತನ ಕಟ್ಟಡಗಳ ಉದ್ಘಾಟನೆಯೊಂದಿಗೆ ಎಂ.ಡಿ. ನಾರಾಯಣ್-ಎಂ.ಡಿ. ಬಾಲಕೃಷ್ಣ ಸೋದರರಿಗೆ ಸ್ಮರಣೀಯ ನಾಗರಿಕ ಸನ್ಮಾನವು ಸೆ. 24ರಂದು ನಡೆಯಿತು.

ಹರಿಹರಪುರ ಮಠಾಧೀಶರ ಸಮ್ಮುಖದಲ್ಲಿ ಪಿ.ಜಿ. ಗುರ್ಜರ್‌ರವರ ಅಧ್ಯಕ್ಷತೆಯಲ್ಲಿ ಆಸ್ಪತ್ರೆ ಕಟ್ಟಡ ಉದ್ಘಾಟಿಸಿದ ಜಿ. ಪ. ಅಧ್ಯಕ್ಷ ಎಸ್.ವಿ. ಮಂಜುನಾಥ್, ಈ ಕಟ್ಟಡಕ್ಕಾಗಿ ತಮ್ಮ ತಂದೆಯವರ ಹೆಸರಲ್ಲಿ 6 ಲಕ್ಷ ರೂ. ದಾನ ನೀಡಿದ ಈ ಸೋದರರನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು.

ಜಿಲ್ಲಾ ಪರಿಷತ್ ಪರವಾಗಿ ಎಂ. ಡಿ. ಸೋದರರಿಗೆ ಗೀತೋಪದೇಶದ ಶ್ರೀಗಂಧದ ಕೆತ್ತನೆಯನ್ನು ನೀಡಿ ಸನ್ಮಾನಿಸಿದ ಎಚ್. ಜಿ. ಗೋವಿಂದಗೌಡರು ತಮ್ಮ ಸುದೀರ್ಘ ಭಾಷಣದಲ್ಲಿ, ತುರ್ತುಪರಿಸ್ಥಿತಿಯಲ್ಲಿ ದೇವೇಗೌಡರ ಸ್ಮಾರಕ ವೃತ್ತವನ್ನು ಒಡೆದು ಹಾಕಿದ ಅಧಿಕಾರಿಗಳ ವರ್ತನೆ, ಪ್ರೌಢಶಾಲೆ ಸರ್ಕಾರಿ ಕಿರಿಯ ಕಾಲೇಜಾಗಿ ಬಡ್ತಿ ಹೊಂದಿದಾಗ ದಾನಿ ದೇವೇಗೌಡರ ಹೆಸರನ್ನೇ ಕೈಬಿಟ್ಟದ್ದು, ಮುಂತಾದ ಉದಾಹರಣೆಗಳನ್ನು ನೀಡಿ, ಯಾವತ್ತೂ ದಾನಿಗಳ ಮನ ನೋಯದಂತೆ ನಡೆದುಕೊಳ್ಳಬೇಕಾದ ಅಗತ್ಯವನ್ನು ಒತ್ತಿ ಹೇಳಿದರು.

ಸರ್ಕಾರಿ ಆಸ್ಪತ್ರೆಯ ಸಿಬ್ಬಂದಿ ವರ್ಗದವರ ಬಗ್ಗೆ ಈಚೀಚೆಗೆ ಎಲ್ಲ ತರದ ಆರೋಪಗಳು ವಿಪರೀತವಾಗಿ ಕೇಳಿ ಬರುತ್ತಿರುವುದನ್ನು ಪ್ರಸ್ತಾಪಿಸಿದ ಅವರು, "ನಿಷ್ಠೆಯಿಂದ, ಬಡ ಜನರಿಗೆ ಉಪಕಾರವಾಗುವಂತೆ ತಮ್ಮ ಕರ್ತವ್ಯ ನಿರ್ವಹಿಸಲು ಇಚ್ಛಿಸದ ಯಾರೇ ಇದ್ದರೂ ಕೂಡಲೇ ವರ್ಗ ಮಾಡಿಸಿಕೊಂಡು ಎಲ್ಲಿಗೆ ಬೇಕಾದರೂ ಹೋಗಿಬಿಡಿ" ಎಂದು ಕಟುವಾಗಿ ಹೇಳಿದರು.

ಜಂತೆಯೇ ಜನರು ಕೂಡ ಇಂಥ ಉತ್ತಮವಾದ ಆಸ್ಪತ್ರೆಯನ್ನು ಬೇಕಾಬಿಟ್ಟಿ ಗಲೀಜು ಮಾಡದೆ, ಚೊಕ್ಕಟವಾಗಿ ಇಟ್ಟುಕೊಳ್ಳಲು ಸಿಬ್ಬಂದಿಯೊಡನೆ ಸಹಕರಿಸಬೇಕು ಎಂದೂ ಅವರು ಮನವಿ ಮಾಡಿದರು

ಆಶೀರ್ವಚನ ನೀಡಿದ ಹರಿಹರಪುರ ಮಠಾಧೀಶರು, ಕೃತಜ್ಞತೆ ಇಲ್ಲದ ಕಡೆ ಒಳ್ಳೆಯ ಕಾರ್ಯಕ್ಕೆ ಉತ್ಸಾಹ ಕ್ಷೀಣಿಸುತ್ತದೆ. ಈ ದೃಷ್ಟಿಯಿಂದ ಪುರಸ್ಕಾರ ಅಗತ್ಯ. ಆದರೆ ಕರ್ತವ್ಯದ ಹಿಂದೆ ಹೊಗಳಿಕೆಯ ಅಪೇಕ್ಷೆ ಸಲ್ಲದು ಎಂದು ಹೇಳಿದರು.

ವಿಶ್ವ ಬ್ಯಾಂಕ್ ನೆರವಿನ 5 ಲಕ್ಷ ರೂ ವೆಚ್ಚದ ಕೃಷಿ ಇಲಾಖೆ ಕಟ್ಟಡವನ್ನು ಜಿ. ಪ. ಉಪಾಧ್ಯಕ್ಷೆ ಶ್ರೀಮತಿ ರತ್ನಮ್ಮ ಮಲ್ಲೇಗೌಡ ಉದ್ಘಾಟಿಸಿ, ಜಿಲ್ಲೆಯಲ್ಲಿ ಕೃಷಿ ಇಲಾಖೆಗೆ ಪ್ರಪ್ರಥಮ ಸ್ವಂತ ಕಟ್ಟಡವನ್ನು ನೀಡಿದರು. ಜಿ.ಪ. ಸದಸ್ಯೆ ಸುಮಿತ್ರಮ್ಮ ಅವರೂ ಮಾತನಾಡಿದರು.

ಆರಂಭದಲ್ಲಿ ಮಂಡಲ ಪ್ರಧಾನರು, ಜಿ. ಪ. ಸದಸ್ಯರು, ಸಂಘ ಸಂಸ್ಥೆಗಳವರು ಮುಂತಾಗಿ 50ಕ್ಕೂ ಹೆಚ್ಚು ಮಂದಿ ಸನ್ಮಾನಿತರಿಗೆ ಹಾರಾರ್ಪಣೆ ಮಾಡಿ, ಒಂದು ಹೃದಯಸ್ಪರ್ಶಿ ಸನ್ನಿವೇಶ ಸೃಷ್ಟಿಸಿದರು. ಸನ್ಮಾನಕ್ಕೆ ಉತ್ತರಿಸಿದ ಎಂ. ಡಿ. ಬಾಲಕೃಷ್ಣ, ಆಸ್ಪತ್ರೆಯ ಹೆಸರು ಉಳಿದು ಅದರ ಕೀರ್ತಿ ಹಬ್ಬಲಿ ಎಂದು ಆಶಿಸಿ, ಜನರಿಗೆ ಅನುಕೂಲವಾಗುವಂತೆ ಕರ್ತವ್ಯ ನಿರ್ವಹಿಸಲು ಸಿಬ್ಬಂದಿಗೆ ಕರೆ ನೀಡಿದರು.

ಹಾಸ್ಯಪ್ರಿಯರಾಗಿದ್ದ ದಿ॥ ದೇವೇಗೌಡರ ಒಡನಾಟದ ತಮ್ಮ ಅನುಭವಗಳನ್ನು ಸ್ಮರಿಸುತ್ತ ಸಭಿಕರನ್ನು ನಗೆಗಡಲಲ್ಲಿ ಮುಳುಗಿಸಿದ ಪಿ. ಜಿ. ಗುರ್ಜರ್‌ರವರು, ಆಸ್ಪತ್ರೆಯ ಈ ಮೊದಲಿನ ಕಟ್ಟಡದ ದುಃಸ್ಥಿತಿಯನ್ನು ವಿವರಿಸಿ, ಇದನ್ನು ಜಿಲ್ಲಾ ಪರಿಷತ್ತು ಗಂಭೀರವಾಗಿ ಪರಿಗಣಿಸಬೇಕೆಂದರು

ಜಿ. ಪ. ಸದಸ್ಯ ಬಿ. ಜಿ. ಚಿದಂಬರ್ ಸ್ವಾಗತಿಸಿ ಬಿಂತ್ರವಳ್ಳಿ ಪ್ರಧಾನ ವಸಂತ ಅಜಿಲ ಸಂದೇಶ ವಾಚನ ಮಾಡಿದರು. ಮಧ್ಯಂತರ ಮಂಡಲ ಪ್ರಧಾನ ಕೆ. ವಿ. ಮಂಜುನಾಥ ಶೆಟ್ಟಿ ಸನ್ಮಾನ ಪತ್ರ ಓದಿದರು. ಕೃಷಿ ಇಲಾಖೆ ಕಟ್ಟಡದ ಬಗ್ಗೆ ಪ್ರಧಾನ ಕೃಷಿ ಅಧಿಕಾರಿ ತಿಳಿಸಿದರು. ಆಸ್ಪತ್ರೆ ವರದಿಯನ್ನು ಡಾ॥ ಪ್ರಸಾದ್ ಓದಿದರು. ಬಿ.ಡಿ.ಓ. ರಾಮಮೂರ್ತಿ ಕಾರ್ಯಕ್ರಮ ನಿರೂಪಿಸಿ, ತಾಲ್ಲೂಕು ಪಂಚಾಯ್ತಿ ಅಧ್ಯಕ್ಷ ಕೆ. ಎಸ್. ಕಾಡಪ್ಪಗೌಡ ವಂದಿಸಿದರು.

ವಸಂತ ಸಾಹಿತ್ಯೋತ್ಸವ

ಕೊಪ್ಪ : ಇಲ್ಲಿನ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಶಾಖೆಯ ಉದ್ಘಾಟನೆ ಮತ್ತು ವಸಂತ ಸಾಹಿತ್ಯೋತ್ಸವ ಸೆ. 28 ರಂದು ಎ. ಮನೋಹರರಾವ್ ಅಧ್ಯಕ್ಷತೆಯಲ್ಲಿ ಪ್ರ. ದ. ಕಾಲೇಜಿನಲ್ಲಿ ನಡೆಯಿತು.

ಕಿರಿಯ ಕಾಲೇಜು ಪ್ರಿನ್ಸಿಪಾಲ್ ಎನ್. ಮೋಹನದಾಸ್ ಭಟ್ ಉದ್ಘಾಟನೆ ನೆರವೇರಿಸಿದರು. ನ. ರಾ. ಪುರ ಪ್ರ. ದ. ಕಾಲೇಜು ಪ್ರಿನ್ಸಿಪಾಲ್ ಎನ್.ಕೆ. ಹಾಲೇಶ್ ಕನ್ನಡ ನಾಡು-ನುಡಿ-ಪರಂಪರೆ ಕುರಿತು ಭಾಷಣ ಮಾಡಿದರು. ಪ್ರಿನ್ಸಿಪಾಲ್ ನೊ. ಸಂ. ತಿಮ್ಮೇಗೌಡ ಮುಖ್ಯ ಅತಿಥಿಯಾಗಿದ್ದರು.

ತಾ॥ ಸಮಿತಿ ಕಾರ್ಯದರ್ಶಿ ಕೆ. ಸಿ. ವೆಂಕಟೇಶ್ ಸ್ವಾಗತಿಸಿದರು. ಶೃಂಗೇರಿ ತಾ॥ ಸಮಿತಿ ಅಧ್ಯಕ್ಷ ದ.ರಾಜಣ್ಣ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ಪರಿಚಯ ನೀಡಿದರು. ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಗುರುರಾಜತಂತ್ರಿ ವಂದಿಸಿದರು. (ವಿವರ ಮುಂದಿನ ಸಂಚಿಕೆಯಲ್ಲಿ)

ವಿಚಾರ ಗೋಷ್ಠಿ

ಕುವೆಂಪು ಗೌರವಾರ್ಥ ನಡೆಯುವ ಕಾವ್ಯಗಾರಿಗಳಸ್ಥಳ ನಿಸ್ಸರ್ಗಬಗ್ಗೆ ಸಮಗ್ರ ಅಭಿಪ್ರಾಯ ರೂಪಿಸಲು ಕೊಪ್ಪ ಸಮೀಪದ ಗಡಿಕಲ್ಲಿನಲ್ಲಿ ಸಂಸ್ಕೃತಿ ಮಂದಿರದಲ್ಲಿ ಗಾಂಧಿ ಜಯಂತಿಯಂದು ಮಧ್ಯಾಹ್ನ 3 ಗಂಟೆಗೆ ವಿಚಾರ ಗೋಷ್ಠಿ ಏರ್ಪಡಿಸಿದೆ ಅಧ್ಯಕ್ಷತೆ: ನೊ.ಸಂತಿ. ಶೃಂಗೇರಿ, ತೀರ್ಥಹಳ್ಳಿ ಕಾಲೇಜು ಉಪನ್ಯಾಸಕರುಗಳು ಭಾಗವಹಿಸುವರು ಆಸಕ್ತರೆಲ್ಲರಿಗೂ ಸ್ವಾಗತವಿದೆ.

ತೆಂಗಿನಮನೆಯಲ್ಲಿ ಗ್ರಾ॥ ಕ್ರೀಡಾಕೂಟ

ಕೊಪ್ಪ : ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಆಶ್ರಯದ ಗ್ರಾಮೀಣ ಕ್ರೀಡಾ ಕೂಟ ಅ. 15 ರಿಂದ ಇಲ್ಲಿಗೆ ಸಮೀಪದ ತೆಂಗಿನಮನೆಯ ಎನ್. ಜಿ. ಕುಲಾಸೊ ಸ್ಮಾರಕ ಕ್ರೀಡಾಂಗಣದಲ್ಲಿ ನಡೆಯುವುದೆಂದು ಸ್ಟಾರ್ ಸ್ಪೋರ್ಟ್ಸ್ ಅಸೋಸಿಯೇಶನ್ ಅಧ್ಯಕ್ಷ ಅನಿಲ್ ಕುಲಾಸೊ ತಿಳಿಸಿದ್ದಾರೆ.

ಅ. 22ರಂದು ಇದೇ ಸಂಸ್ಥೆ ಆಶ್ರಯದಲ್ಲಿ ಲೀಗ್ ಮಾದರಿಯ ಜಿಲ್ಲಾ ಮಟ್ಟದ ನಿಗದಿತ ಓವರ್‌ಗಳ ರಬ್ಬರ್‌ಬಾಲ್ ಕ್ರಿಕೆಟ್ ಟೂರ್ನಿ ಏರ್ಪಾಡಾಗಿದೆ ಆಸಕ್ತ ತಂಡಗಳು ಅಂಚೆಪೆಟ್ಟಿಗೆ 18, ಕೊಪ್ಪ-ಈ ವಿಳಾಸಕ್ಕೆ 10-10-1989 ರೊಳಗಾಗಿ ಪ್ರವೇಶ ಪತ್ರಗಳನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಯನ್ನೂ ಸಂಸ್ಥೆ ಅಧ್ಯಕ್ಷರಿಂದ ಪಡೆಯಬಹುದು.

'ಹಾಟ್‌ಲೈನ್'

ಪ್ರಧಾನ ಮಂತ್ರಿಗಳು ಶೃಂಗೇರಿಗೆ ಭೇಟಿ ನೀಡಿದ್ದಾಗ ಅವರಿಗಾಗಿ 3 ದೂರವಾಣಿ ಲೈನ್‌ಗಳನ್ನು ಶೃಂಗೇರಿಗೂ ದೆಹಲಿಗೂ ಮಧ್ಯೆ 'ಹಾಟ್ ಲೈನ್' ಆಗಿ ಕಾದಿಡಲಾಗಿತ್ತು.


ಆದರೆ ಶೃಂಗೇರಿಗೂ ಅದರ ಮಾತೃ ಕೇಂದ್ರವಾದ ಕೊಪ್ಪಕ್ಕೂ ಮಧ್ಯೆ ಕೇವಲ 4 ಲೈನ್‌ಗಳಿದ್ದು, ಅದರಲ್ಲಿ 3ನ್ನು ಹೀಗೆ ಹಾಟ್‌ಲೈನ್ ಮಾಡಿಬಿಟ್ಟರೆ, ಅದೇ ಸಂದರ್ಭದಲ್ಲಿ ಶೃಂಗೇರಿಗೆ ಬರುವ ಇನ್ನಿತರ ನೂರಾರು ಕರೆಗಳನ್ನು ಉಳಿದ ಒಂದೇ ಲೈನಿನಲ್ಲಿ ಪೂರೈಸುವುದು ಹೇಗೆ?

ಇದೇ ರೀತಿ ಕೇಂದ್ರ ಮಂತ್ರಿಗಳು, ರಾಜ್ಯಪಾಲರು ಬಂದಾಗ 2 ಲೈನುಗಳನ್ನು ಕಾದಿರಿಸಲಾಗುತ್ತದೆ. ನಿಜವಾಗಿ ಒಂದು ಹಾಟ್‌ಲೈನ್ ಎಂಥವರ ಅವಶ್ಯಕತೆಗೂ ಸಾಕಾಗುತ್ತದೆ. ಇಲಾಖೆಯು ಮೊದಲು ಇದನ್ನು ಅರ್ಥ ಮಾಡಿಕೊಂಡು ಸೂಕ್ತವಾಗಿ ಮಾರ್ಪಾಟು ಮಾಡಬೇಕು ಎನ್ನುತ್ತಾರೆ — ಇಂಥ ಪರಿಸ್ಥಿತಿಗಳಲ್ಲಿ ತಿಣುಕಿ ಒತ್ತಡಕ್ಕೆ ಸಿಕ್ಕುವ ದೂರವಾಣಿ ಸಿಬ್ಬಂದಿ ವರ್ಗದವರು.

ಬಾಪೂಜಿಯ ಈ ನಾಡಿನಲ್ಲಿ....!

ಗಾಂಧೀ ಜಯಂತಿಯ ಹಿನ್ನೆಲೆಯಲ್ಲಿ ಒಂದು ಅವಲೋಕನ.

● ಚಾವಲ್ಮನೆ ಸುರೇಶ್ ನಾಯಕ್



ಗಾಂಧೀಜಿ ತಮ್ಮ ಅಪಾರ ಇಚ್ಛಾಶಕ್ತಿಯಿಂದ ಈ ದೇಶದ ಬದುಕಿನ ಆಳದ ಆಳಕ್ಕೆ ಹೊಕ್ಕು ಪರಿಶೀಲಿಸಿ, ರೋಗ ಮೂಲವನ್ನು ಪತ್ತೆ ಹಚ್ಚಿ, ಅತ್ಯಂತ ಪರಿಶ್ರಮದಿಂದ ನಿವಾರಣೋಪಾಯವನ್ನು ಕಂಡು ಹಿಡಿದು ಸ್ವತಃ ಅನುಸರಿಸಿಯೂ ತೋರಿಸಿದ್ದಾರೆ. ಆದರೂ ಈ ದೇಶ ಆ ತತ್ವ-ಆದರ್ಶಗಳನ್ನು, ಆ ಜೀವನ ಮಾರ್ಗವನ್ನು ಅನುಸರಿಸಲು ಇನ್ನೂ ತಯಾರಿಲ್ಲವೇಕೆ ?

ನಮಗೆ ಬೇಕಿರುವುದು ಗಾಂಧೀ ಜಯಂತಿಯೋ, ಗಾಂಧೀ ಜೀವನ ಮಾರ್ಗದ ಅನುಸರಣೆಯ ಪ್ರಾಮಾಣಿಕ ಪ್ರಯತ್ನವೋ ? ಇಂಥ ಅನುಸರಣೆಯ ಪ್ರಾಮಾಣಿಕ ಪ್ರಯತ್ನವಿಲ್ಲದಿರುವ 'ದಿನಾಚರಣೆ'ಗೆ ಯಾವ ಬೆಲೆ ?

ಪ್ರತಿ ವರ್ಷವೂ ಅಕ್ಟೋಬರ್ 2ರಂದು 'ಗಾಂಧಿ ಜಯಂತಿ'ಯನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತೇವೆ. ಸಭೆ, ಮೆರವಣಿಗೆಗಳನ್ನು ನಡೆಸಿ, ಜೈಕಾರ ಹಾಕಿ ಮಹಾತ್ಮಾ ಗಾಂಧಿಯವರನ್ನು ಹಾಡಿ ಹೊಗಳುತ್ತೇವೆ. ಅದೇ ಹೊತ್ತಿನಲ್ಲೇ ಗಾಂಧೀಜಿಯ ತತ್ವ, ಆದರ್ಶಗಳು ಗಾಳಿ ಪಾಲಾಗಿರುತ್ತವೆ

ಈ ನಾಡಿನ ಜನ ಜೀವನದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ–ಈ ಎಲ್ಲ ಮಗ್ಗುಲುಗಳನ್ನೂ ಆಳವಾಗಿ ಅಭ್ಯಸಿಸಿ, ಇಡೀ ಸಮಾಜದ ಒಟ್ಟು ಬದುಕಿಗೆ ಎಲ್ಲ ರೀತಿಯ ಮಾರ್ಗಸೂತ್ರಗಳನ್ನೂ ಗಾಂಧೀಜಿ ರೂಪಿಸಿಕೊಟ್ಟಿದ್ದಾರೆ. ಆದರೆ ಅವುಗಳನ್ನು ಸ್ವಲ್ಪವಾದರೂ ಅನುಷ್ಠಾನಕ್ಕೆ ತರುವ ಬಗ್ಗೆ ನಾವೆಷ್ಟು ಕರ್ಮಠರಾಗಿದ್ದೇವೆ!

1918ರಲ್ಲಿ ಗುಜರಾತಿನ ಖೇಡಾ ಜಿಲ್ಲೆಯಲ್ಲಿ ಒಂದು ಸಭೆಯಲ್ಲಿ ಮಾತನಾಡುತ್ತಾ ಬಾಪೂಜಿಯವರು, "ಜನ ಸೇವಕ ಸನ್ಮಾನ, ಗೌರವ, ಬಿರುದುಗಳನ್ನು ಒಪ್ಪಿಕೊಳ್ಳುವಂತಿಲ್ಲ. ಅವುಗಳಿಗಾಗಿ ಆಸೆ ಪಟ್ಟ ದಿನವೇ ಅವನು ನಾಶವಾಗಿ ಹೋಗುತ್ತಾನೆ" ಎಂದಿದ್ದರು. ಆದರೆ ಇಂದು ರಾಜಕಾರಣಿಗಳು ಚುನಾವಣೆಯಲ್ಲಿ ಗೆದ್ದು ಬಂದ ಮೇಲೆ ಜನ ಸೇವೆಯನ್ನು ಬದಿಗೊತ್ತಿ, ಸದಾ ಸನ್ಮಾನ ಸಮಾರಂಭಗಳಲ್ಲೇ ಕಾಲ ಕಳೆಯುತ್ತಾರೆ. ಪಟ್ಟಭದ್ರ-ಹಿತಾಸಕ್ತಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲೋಸುಗ ನಮ್ಮ ಶಾಸಕರು, ಮಂತ್ರಿಗಳನ್ನು ಸನ್ಮಾನಿಸಿ, ಹಾರ ತುರಾಯಿಗಳನ್ನರ್ಪಿಸಿ, ಅವರ ಕೃಪೆಗೆ ಪಾತ್ರರಾಗುತ್ತಾರೆ. ನಂತರ ಅವರನ್ನು ಸಂತೃಪ್ತಿಗೊಳಿಸುವುದಕ್ಕೇ ಈ 'ಜನನಾಯಕರ' ಆಸ್ಥೆಯೆಲ್ಲ ಮೀಸಲು !

"ಎಷ್ಟೇ ನೋವು ಮತ್ತು ತೊಂದರೆಗಳಿದ್ದರೂ ಸತ್ಯದ ಮಾರ್ಗದಲ್ಲಿ ನಡೆಯಬೇಕು" ಎಂಬುದು ಗಾಂಧೀಜಿಯವರ ನಿಲುವಾಗಿತ್ತು. ಆದರೆ ಇಂದು ಸತ್ಯ ಸಾಯುತ್ತಿದೆ; ಸುಳ್ಳು, ಭ್ರಷ್ಟತೆ, ಅಪ್ರಾಮಾಣಿಕತೆಗಳೇ ವಿಜೃಂಭಿಸುತ್ತಿವೆ. ಪ್ರಧಾನ ಮಂತ್ರಿ, ಮುಖ್ಯ ಮಂತ್ರಿಗಳಂಥ ಅತ್ಯುನ್ನತ ಜವಾಬ್ದಾರಿ ಸ್ಥಾನಗಳಲ್ಲಿರುವವರೇ ಭ್ರಷ್ಟಾಚಾರದ ಆಪಾದನೆ ಹೊತ್ತು, ಕಟಕಟೆಯಲ್ಲಿ ನಿಲ್ಲುವಂಥ ಪರಿಸ್ಥಿತಿ ಬಂದೊದಗಿದೆ !

ಬಾಪೂಜಿ ಹಿಂಸೆಯ ಕಡು ವೈರಿಯಾಗಿದ್ದರು. ಆದರೆ ಇಂದು ನಡೆಯುತ್ತಿರುವುದೇನು? ಇಡೀ ದೇಶವೇ ಹಿಂಸೆಯ ಹಾದಿ ಹಿಡಿದಿದೆ. ತನ್ನ ಪ್ರಜೆಗಳಿಗೆ ಒಂದು ಹೊತ್ತಿನ ಊಟದ ಖಾತ್ರಿಯನ್ನೂ ನೀಡಲಾಗದ ಸರ್ಕಾರ ಕ್ಷಿಪಣಿ, ಅಣು ಬಾಂಬ್‌ಗಳಿಗೆ ಕೊರತೆಯಿಲ್ಲದಷ್ಟು ಹಣ ಸುರಿಯುತ್ತಿದೆ. "ನಾವು ಶಾಂತಿ ಬಯಸುತ್ತೇವಾದರೂ, ನಮ್ಮ ಶತ್ರುಗಳ ವಿರುದ್ಧ ಸನ್ನದ್ಧತೆಗಾಗಿ ಇದೆಲ್ಲ ಬೇಕು" ಎಂಬ ವಾದ. ಶಾಂತಿ ಬಯಸುವವನಿಗೆ ಮೊದಲು ತನ್ನ ಅಹಿಂಸಾ ವ್ರತದ ಬಗ್ಗೆ ಆತ್ಮವಿಶ್ವಾಸ ಬೇಕೆಂದ ಗಾಂಧೀಜಿ ಅದನ್ನು ಸ್ವತಃ ಆಚರಿಸಿ ತೋರಿಸಿದ್ದರು. ನಿರ್ದಯವಾಗಿ ಗುಂಡಿಕ್ಕುವ ಬ್ರಿಟಿಷರ ವಿರುದ್ಧ ಈ ಅಖಂಡ ಅಹಿಂಸಾ ಮಾರ್ಗವೇ ಅವರ ಸರ್ವ ಸನ್ನದ್ಧತೆಯಾಗಿತ್ತಲ್ಲವೆ?

ತನ್ನ ಮಿತಿಯಿಲ್ಲದ ಶಸ್ತ್ರಾಸ್ತ್ರ ಸಂಗ್ರಹಣೆಯ ವ್ಯಾಮೋಹಕ್ಕೆ ನಮ್ಮ ದೇಶ ಕೊಡುವ ನೆಪವನ್ನೇ ತಾನೆ ಯುದ್ಧೋತ್ಸಾಹಿ ಬಲಿಷ್ಠ ರಾಷ್ಟ್ರಗಳೂ ನೀಡುತ್ತಿರುವುದು? ಹಾಗೆಂದ ಮೇಲೆ ವಿಶ್ವದ ಜನತೆಗೆ ಶಾಂತಿ ಎಲ್ಲಿ ಬಂತು? ಅವರದ್ದು ಕೇವಲ ಪೊಳ್ಳು ನೆಪವೆಂದು ನಮಗೆ ಗೊತ್ತು; ಆದರೆ ನಮ್ಮ ದೇಶದ್ದೂ ಅದೇ ತಾನೆ? 'ಸೂರ್ಯ ಮುಳುಗದ ಸಾಮ್ರಾಜ್ಯ'ವನ್ನೇ ಅಹಿಂಸೆಯಿಂದ ಗೆದ್ದ ಈ ಬೃಹತ್ ರಾಷ್ಟ್ರದ ಶಸ್ತ್ರಾಸ್ತ್ರ ಪೈಪೋಟಿಯ ಈ ವ್ಯಾಮೋಹ ಅಹಿಂಸೆಗೆ ತಿಲಾಂಜಲಿಯಿಕ್ಕುತ್ತದರ ಕುರುಹೇ ಅಲ್ಲವೆ?

ದೇಶದ ದೃಷ್ಟಿಯೇ ಹೀಗೆ ಹಿಂಸೆಯತ್ತ ವಾಲಿರುವಾಗ, ಇನ್ನು ದೇಶದೊಳಗಿನ ಪಂಜಾಬ್, ನಾಗಾ, ಮಿಜೊ, ಬೋಡೋ ಇತ್ಯಾದಿ ಪ್ರತ್ಯೇಕತಾ ಹಿಂಸಾಕಾಂಡಗಳ ಬಗೆಗಾಗಲಿ, ಮತೀಯ ಮತ್ತು ರಾಜಕೀಯ ಹಿಂಸಾಕಾಂಡಗಳ ಬಗೆಗಾಗಲಿ ಹೇಳುವುದೇನಿದೆ?

ಇಂದು 'ಸ್ತ್ರೀ ಸಮಾನತೆ', 'ಸ್ತ್ರೀ ಸ್ವಾತಂತ್ರ್ಯ'ಗಳೆಲ್ಲ ಕೇವಲ ಕನಸಾಗಿಯೇ ಉಳಿದಿವೆ. ಹಾಡ ಹಗಲೇ ಸ್ತ್ರೀಯ ಮೇಲೆ ಅತ್ಯಾಚಾರ ನಡೆಯುವುದು, ರಕ್ಷಣೆ ಒದಗಿಸಬೇಕಾದ ಪೋಲೀಸರೇ ಇಂಥ ದುಷ್ಕೃತ್ಯಗಳಲ್ಲಿ ಭಾಗಿಯಾಗುತ್ತಿರುವುದು ದಿನ ನಿತ್ಯದ ಸುದ್ದಿಯಂತಾಗಿದೆ. "ಸ್ತ್ರೀಯ ಮೇಲೆ ನಡೆಯುತ್ತಿರುವ ಪುರುಷನ ಅತ್ಯಾಚಾರವು ಅತೀ ಹೆಚ್ಚು ಕ್ರೂರವಾದದ್ದು ಮತ್ತು ಇಡೀ ಸಮಾಜ ತಲೆ ತಗ್ಗಿಸುವಂಥಾದ್ದು" ಎಂದು ಗಾಂಧೀಜಿ ಹೇಳಿದ್ದರು. ವರದಕ್ಷಿಣೆ ತರಲಿಲ್ಲವೆಂಬ ಮೂರ್ಖ ಕಾರಣಕ್ಕಾಗಿ ಹೆಣ್ಣನ್ನು ಜೀವ ಸಹಿತ ಸುಡುವಂಥ ಅಮಾನುಷ ಕೃತ್ಯಕ್ಕೂ ಈ ದೇಶದಲ್ಲಿ ಹೇಸಿಗೆಯಿಲ್ಲ. ಹೆಣ್ಣು ಹೆರುವುದೇ ಒಂದು ದೊಡ್ಡ ಶಾಪ ಎನ್ನಿಸಿದೆ. ವೇಶ್ಯಾ ವೃತ್ತಿ, ಸತಿ ಪದ್ಧತಿಗಳಂಥ ಪಿಡುಗುಗಳು ಸ್ತ್ರೀಗೆ ಮಾರಕವಾಗಿವೆ. ಇತ್ತೀಚೆಗೆ ರಾಜಸ್ಥಾನದ ರೂಪ್‌ಕನ್ವರ್ ಎಂಬ ಮಹಿಳೆಯನ್ನು ಬಲವಂತವಾಗಿ 'ಸತಿ'ಯಾಗಿಸಿ, ಅದರಿಂದ 'ಲಾಭ' ಗಳಿಸುತ್ತಿರುವವರ ಬಗ್ಗೆ ಈ ದೇಶದ ಕಾನೂನು ಕೂಡ ಏನೂ ಮಾಡಲಿಲ್ಲವೆಂದರೆ ಸ್ತ್ರೀಯ ಬದುಕಿನ ಅನಿಶ್ಚಿತತೆ, ದುರ್ಭರತೆ ಅರಿವಾಗುತ್ತದೆ.

ಗಾಂಧೀಜಿಯವರು ಅಸ್ಪೃಶ್ಯತೆಯನ್ನು ಆಮೂಲಾಗ್ರವಾಗಿ ತೊಡೆದು ಹಾಕಲು ಅವಿರತವಾಗಿ ಶ್ರಮಿಸಿದ್ದರು. ಆದರೆ ಇಂದೂ ಸಹ ಅಸ್ಪೃಶ್ಯತೆಯ ಆಚರಣೆ ಮಾತ್ರವಲ್ಲ, ಹರಿಜನ–ಗಿರಿಜನರ ಮೇಲೆ ಹಲ್ಲೆ, ಆಸ್ತಿ ಹಾನಿ, ಅತ್ಯಾಚಾರ, ಕೊಲೆಯಂಥ ಪ್ರಕರಣಗಳು ಹೆಚ್ಚುತ್ತಲೇ ಇವೆ; ಕಳೆದ 10 ವರ್ಷಗಳಲ್ಲಿ ಇವು ಮೂರು ಪಟ್ಟು ಹೆಚ್ಚಿವೆ ಎಂದು ರಾಷ್ಟ್ರೀಯ ಕಾನೂನು ನಿರ್ದೇಶಕರೊಬ್ಬರು ಪ್ರಕಟಿಸಿದ್ದಾರೆ. ಇಂದಿಗೂ ಹಳ್ಳಿಗಳ ಹೋಟೆಲುಗಳಲ್ಲಿ ಹರಿಜನರಿಗೆ ಪ್ರತ್ಯೇಕ ತಟ್ಟೆ–ಲೋಟ; ಜಾಗವಂತೂ ಹೊಸಿಲಿನ ಹೊರಗೇ ! ಕಾಗದದಲ್ಲಿ ತಿಂಡಿ ಕೊಟ್ಟಿದ್ದಕ್ಕಾಗಿ ಈಚೆಗೆ ದಾವಣಗೆರೆ ಬಳಿಯ ಸಿರಮಗೊಂಡನಹಳ್ಳಿಯ ದಲಿತ ಯುವಕರು ಈಚೆಗೆ ಪ್ರತಿಭಟಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ನಮ್ಮ ಕರ್ನಾಟಕದಲ್ಲೇ, ಬೆಂಡಿಗೇರಿಯಲ್ಲಿ ಮಲ ತಿನ್ನಿಸಿದ್ದು, ಈಚೆಗೆ ತುಮಕೂರು ಜಿಲ್ಲೆಯ ಬೆಂಚಿ ಗ್ರಾಮದಲ್ಲಿ 'ಸೆರಗು' ಹೋಗಲು ನಿರಾಕರಿಸಿದ ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ್ದು, ಅಷ್ಟೇಕೆ, ಮೊನ್ನೆಯಷ್ಟೇ ನಮ್ಮ ಕಾಲು ಬುಡದಲ್ಲಿ–ಶೃಂಗೇರಿಯಲ್ಲಿ–ಹರಿಜನರ ಮೇಲೆ ನಡೆದ ಸಾಮೂಹಿಕ ಹಲ್ಲೆ, ಇವೆಲ್ಲ ಈ ವಿಚಾರದಲ್ಲಿ ನಾವು ಗಾಂಧೀಜಿಯವರ ಆಶಯಗಳಿಗೆ ವಿರುದ್ಧವಾಗಿ ಹೇಗೆ ಇನ್ನೂ ಹಿಂದಕ್ಕೆ ಹೋಗುತ್ತಿದ್ದೇವೆಂಬುವನ್ನು ಸೂಚಿಸುವಂತಿವೆ. ಎಷ್ಟೋ ಪ್ರಕರಣಗಳಲ್ಲಿ ಪ್ರತಿಷ್ಠಿತರು, ಮಂತ್ರಿ–ಶಾಸಕರು, ಪೋಲೀಸರು ಸಹ ಅಪರಾಧಿಗಳ ಜೊತೆ ಶಾಮೀಲಾಗಿರುವುದು ಪ್ರಕಟವಾಗುತ್ತಿರುತ್ತದೆ. ಆದರೂ ಸರ್ಕಾರಗಳು ಈ ಬಗ್ಗೆ ಏನೂ ಮಾಡಲಾರದ ನಿರ್ವೀರ್ಯ ಸ್ಥಿತಿಯಲ್ಲಿವೆ.

ದೇಶದಲ್ಲಿ ತಾಂಡವವಾಡುತ್ತಿರುವ ದಾರಿದ್ರ್ಯಕ್ಕಂತೂ ಯಾವ ವರ್ಣನೆಯೂ ಸರಿಗಟ್ಟಲಾರದು. ಬಡವರ ಪಾಲಿಗೆ ನಿರಂತರ ಹಸಿವು ಒಂದು ಸಹಜ ಸ್ಥಿತಿಯೇ ಆಗಿಬಿಟ್ಟಿದೆ! ಸರ್ಕಾರಿ ಅಂಕೆ–ಅಂಶಗಳ ಪ್ರಕಾರವೇ ಶೇಕಡಾ 40ರಷ್ಟು ಜನ ಬಡತನದ ರೇಖೆಯಿಂದ ಕೆಳಗಿದ್ದರೆ, 25 ಪ್ರಮುಖ ಉದ್ಯಮಿ ಕುಟುಂಬಗಳ ಮೂಲ ಬಂಡವಾಳ ಸ್ವಾತಂತ್ರ್ಯ ನಂತರ 200-300 ಪಟ್ಟು (10 ಕೋಟಿಯಿದ್ದದ್ದು 2000 – 3000 ಕೋಟಿಯಷ್ಟು !) ಬೆಳೆದಿದೆ. ಬಡವರೇ ಓಟಿನ ಬ್ಯಾಂಕುಗಳಾಗಿರುವಾಗ ಬಡತನ, ಅಜ್ಞಾನಗಳು ಖಾಯಂ ಆಗಿ ಇರುವುದು ಅನಿವಾರ್ಯ ಎನ್ನೋಣವೆ?

ಪವಿತ್ರವಾದ ಶಿಕ್ಷಣ ಕ್ಷೇತ್ರವೂ ಇಂದು ಅವ್ಯವಸ್ಥೆಯ ಆಗರವಾಗಿದೆ. ಖ್ಯಾತ ಸಾಹಿತಿ ಶಿವರಾಮ ಕಾರಂತರು ಈಚೆಗೆ ನಮ್ಮ ಶಾಲೆಗಳನ್ನು 'ಮಕ್ಕಳ ಹಿಂಸಾಗೂಡುಗಳು' ಎಂದಿರುವುದರಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆಯಿಲ್ಲ. ಶಿಕ್ಷಣಕ್ಕೊಂದು ದಿಕ್ಕೇ ಇಲ್ಲವಾಗಿದೆ. ವಿದ್ಯಾವಂತನೊಬ್ಬನಿಗೆ ಆತನ ವಿದ್ಯೆ ಸ್ವಾವಲಂಬನೆಯನ್ನು ಬೆಳೆಸಿಕೊಳ್ಳಲು ನೆರವಾಗದೆ ಆತ ಜೀವನೋಪಾಯಕ್ಕಾಗಿ ಸರ್ಕಾರದ ಕಡೆಗೇ ನೋಡುವಂತೆ ಮಾಡುತ್ತಿದೆ

'ರಾಷ್ಟ್ರೀಯ ಹೊಸ ಶಿಕ್ಷಣ ನೀತಿ' ಮುಂತಾದ ಅಬ್ಬರದ ಪ್ರಚಾರಗಳನ್ನು ಕೇಳುತ್ತೇವಾದರೂ, ಯಾವುದೇ ಅರ್ಥಪೂರ್ಣ ಬದಲಾವಣೆಯನ್ನು ಅನುಷ್ಠಾನಕ್ಕೆ ತರಲು ದೇಶದ ಬಜೆಟ್ಟು ಶಿಕ್ಷಣ ರಂಗಕ್ಕೆ ಅವಕಾಶವನ್ನೇ ಕೊಡುತ್ತಿಲ್ಲ. ಬಜೆಟ್ಟಿನಲ್ಲಿ ಶಿಕ್ಷಣ ರಂಗದ ಪಾಲು ಸ್ವಾತಂತ್ರ್ಯದ ಈ ವರ್ಷಗಳಲ್ಲಿ ಹತ್ತನೇ ಒಂದು ಭಾಗಕ್ಕಿಳಿದಿದೆ. ಆದರೆ ಪರಮಾಣು ರಂಗವೊಂದಕ್ಕೆ ಮಾತ್ರ ಬಜೆಟ್ಟಿನಲ್ಲಿ ಯಾವುದೇ ಮಿತಿಯ ನಿರ್ಬಂಧವಿಲ್ಲ. (endless Budget)!

"ಯಾವುದೇ ಸರ್ಕಾರ ರೈತರ ಮನೋಸ್ಥೈರ್ಯದ ವಿರುದ್ಧ ನಿಲ್ಲುವುದು ಸಾಧ್ಯವಿಲ್ಲ. ರೈತರು ಅನಕ್ಷರಸ್ಥರೂ ಮುಗ್ಧರೂ ಆಗಿದ್ದಾರೆನ್ನುವುದಕ್ಕಾಗಿ ಅವರನ್ನು ಬಗ್ಗುಬಡಿಯುವುದು ಸರಿಯಲ್ಲ" ಎಂದು ಬಾಪೂಜಿ ಹೇಳಿದ್ದರು. ಆದರೆ ಈ ಕೃಷಿ ಪ್ರಧಾನ ರಾಷ್ಟ್ರದಲ್ಲಿ ಇಂದು ಚುನಾವಣೆ ಕಾಲದಲ್ಲಿ ಮಾತ್ರ ರೈತರ ಅಭ್ಯುದಯದ ಮಂತ್ರಪಠಣ ನಡೆಯುತ್ತದೆ.

(3ನೇ ಪುಟಕ್ಕೆ)

ಓದುಗರ ಪತ್ರಗಳು

ಬ್ರಹ್ಮಲೀನರಾದ ಮಹಾಗುರುಗಳಿಗೆ

ಶ್ರದ್ಧಾಂಜಲಿ

ಮಾನ್ಯರೆ,

ಶೃಂಗೇರಿಯ ಶ್ರೀ ಶಾರದಾ ಪೀಠದ ಹಿರಿಯ ಜಗದ್ಗುರುಗಳು ಶ್ರೀಮದಭಿನವ ವಿದ್ಯಾತೀರ್ಥ ಮಹಾ ಸ್ವಾಮಿಗಳವರು ಇಂದು ಬೆಳಿಗ್ಗೆ ಬ್ರಹ್ಮಲೀನರಾದರೆಂಬ ವಾರ್ತೆಯು ಅವರ ಅಪಾರ ಶಿಷ್ಯವೃಂದಕ್ಕೆ ಅಭಿಮಾನಿಗಳ ಸಮೂಹಕ್ಕೆ ವಿಶೇಷ ಆಘಾತವನ್ನುಂಟುಮಾಡಿದೆ.

ಅವರು ವಿದ್ಯಾನಿಧಿಗಳೂ ತಪೋನಿರತರೂ ಆಗಿದ್ದು ಸದಾ ರಾಷ್ಟ್ರ ಕಲ್ಯಾಣ ಚಿಂತಕರಾಗಿದ್ದರು. ಸನಾತನ ಧರ್ಮ ರಕ್ಷಣೆ, ಭಾರತೀಯ ಸಂಸ್ಕೃತಿಯ ಪುರೋಭಿವೃದ್ಧಿಯ ಬಗ್ಗೆ ವಿಶೇಷ ಗಮನವುಳ್ಳವರಾಗಿದ್ದರು. ಭಾರತೀಯ ಸಂಸ್ಕೃತಿಯ ವಿವಿಧ ಮುಖದ ಪೋಷಣೆಗೆ ವಿಶೇಷ ಶ್ರಮವಹಿಸಿದ್ದರು.

ಅವರು ಕಣ್ಮರೆಯಾದುದರಿಂದ ಭಾರತೀಯ ಸಂಸ್ಕೃತಿಯ ರಕ್ಷಣೆಗೆ ಬಹು ದೊಡ್ಡ ಆಧಾರವೊಂದು ಕಳಚಿಹೋದಂತಾಗಿದೆ.

—ಬಸವಾನಿ ರಾಮಶರ್ಮಾ.

ಹರಿಜನರ ಮೇಲಿನ ಹಲ್ಲೆ: ಜಾತಿ ನಿಂದನೆ ಸರಿಯೆ ?

ಮಾನ್ಯರೆ,

ಶೃಂಗೇರಿಯಲ್ಲಿ ನಿರಪರಾಧಿ ಹರಿಜನರ ಮೇಲೆ ನಡೆದ ಹಲ್ಲೆಯ ಬಗ್ಗೆ ನಿಮ್ಮ 17-9-1989 ರ ಸಂಚಿಕೆಯಲ್ಲಿ ಪ್ರಕಟವಾದ ಕಲ್ಕುಳಿ ವಿಠಲ ಹೆಗ್ಡೆಯವರ ವರದಿ ಚೆನ್ನಾಗಿತ್ತು. ಆದರೆ 'ಜಾತಿ' ಎಂಬ ತಲೆಬರಹ, 'ಜಾತಿಯ ಸೊಕ್ಕು' ಎಂಬ ವಿವರಣೆ, 'ಕೆಲವು ಗೌಡರ ಹುಡುಗರು' ಎಂದು ಎಲ್ಲಾ ಕಡೆ ಬಳಸಿರುವುದು ಅತ್ಯಂತ ಖಂಡನೀಯ.

'ಗೌಡರಾದರೆ ಗಲಾಟೆ ಮಾಡ್ತಾರೆ' ಎಂಬುದಕ್ಕಿಂತ "ಇದು ಪುಂಡರ ಕೆಲಸ" ಎನ್ನಬಹುದಿತ್ತು. ಯಾರು ಗಲಾಟೆ ಮಾಡಿದ್ದಾರೋ ಅವರ ಹೆಸರು ಮಾತ್ರಾ ಬಳಸಬೇಕೇ ಹೊರತು ಗೌಡರು ಎಂದು ಬಳಸಬಾರದಿತ್ತು. ಇನ್ನು ಮುಂದೆ ಇಂತಹ ಸನ್ನಿವೇಶಕ್ಕೆ ಅವಕಾಶ ಕೊಡದಿರಲೆಂದು ಆಶಿಸುತ್ತೇನೆ.

—ಅ. ರಾ. ಸುವರ್ಣ,
ಅಬ್ಬಳಿ, ಹೊಸಕೊಪ್ಪ.

ಪತ್ರಿಕೆಯ ಸ್ಪಷ್ಟನೆ : ಈ ವಿಚಾರ ಖಂಡನೀಯ ಎನ್ನುವುದಕ್ಕಿಂತ, ಇದರಲ್ಲಿ ಪ್ರತಿಯೊಬ್ಬರೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದುದಿದೆ ಎಂದು ನಮ್ಮ ಅಭಿಪ್ರಾಯ. ಹಲ್ಲೆ ನಡೆಸಿದವರು ಪುಂಡರು ಎಂಬುದೇನೋ ನಿಜವೇ. ಪುಂಡರು ಎಲ್ಲಾ ಜಾತಿಗಳಲ್ಲೂ ಇದ್ದಾರೆ. ಹರಿಜನರಲ್ಲಿ ಕೂಡ ಒಬ್ಬೊಬ್ಬರು ಸಿಗಬಹುದು. ಆದರೆ ಇಲ್ಲಿ ನಿರಪರಾಧಿಗಳ ಮೇಲೆ ಹಲ್ಲೆ ನಡೆದಿರುವುದರಲ್ಲಿ ಬರೀ ಪುಂಡಾಟಿಕೆ ಮಾತ್ರ ಇರುವುದೆ?

ಈ ಇಡೀ ಹಲ್ಲೆಗಳ ಸರಮಾಲೆ ನಡೆದದ್ದೇ ಜಾತಿ ಕಾರಣಕ್ಕೆ. ಅಂದರೆ ಮೇಲು ಜಾತಿ-ಕೀಳು ಜಾತಿ ಎಂಬ ಭೇದಭಾವದ ಕಾರಣಕ್ಕೆ. ಹರಿಜನ ಹುಡುಗರಿಂದ ಏದಿರೇಟು ತಿಂದ ಪುಂಡರ ಜೊತೆಗೆ ಇತರರು ಸೇರಿದ್ದೂ ಈ ಜಾತಿ ಕಾರಣಕ್ಕೇ. ಅಲ್ಲದಿದ್ದರೆ ಅವರೇನೂ ಏಟು ತಿಂದವರಾಗಿರಲಿಲ್ಲ. ಹರಿಜನರೆಂದು ಕಂಡವರನ್ನೆಲ್ಲ ಹುಡುಕಿ ಹುಡುಕಿ ಹೊಡೆದದ್ದೂ ಇದೇ ಜಾತಿಯ ಅಹಮಿಕೆಯ ಕಾರಣಕ್ಕೇ. ಏಕೆಂದರೆ ಆ ನಿರಪರಾಧಿಗಳೆಲ್ಲ ಏನು ಮೊದಲಿನ ಹೊಡೆದಾಟದಲ್ಲಿ ಪಾಲ್ಗೊಂಡವರಾಗಿರಲಿಲ್ಲ. ಜಾತಿಯ ಈ ಅಹಮಿಕೆ ನಾಗರಿಕ ಸಮಾಜ ಒಪ್ಪುವ ಇತಿ-ಮಿತಿಗಳನ್ನು ಮೀರಿದಾಗ ಅದನ್ನು 'ಸೊಕ್ಕು' ಎಂದೊಡನೆ ನೋವಾಗಬಹುದಾದರೂ ಅದು ಸತ್ಯ ತಾನೆ ?

'ಆದ್ದರಿಂದಲೇ, ಕೇವಲ 'ಪುಂಡರ ಕೃತ್ಯ' ಎಂದು ಅಡ್ಡ ಗೋಡೆಯ ಮೇಲೆ ದೀಪ ಇಡದೆ, ನಿಷ್ಠುರವಾದ ಸತ್ಯವನ್ನು ಹೇಳಿದ್ದೇವೆ.

ಇದನ್ನು 'ಮೇಲು ಜಾತಿಯವರ ಸೊಕ್ಕು' ಎಂದು ಸಾರಾ ಸಗಟಾಗಿ ಹೇಳಲೂ ಬರುವುದಿಲ್ಲವಷ್ಟೆ? ಈ ಪುಂಡರ ಜೊತೆಗೆ, ಅಸ್ಪೃಶ್ಯರಲ್ಲದ ಜಾತಿಗಳ ಕೆಲ ಪುಂಡು ರಕ್ತದವರೂ ಕೊನೆಯಲ್ಲಿ ಸೇರಿಕೊಂಡಿದ್ದುಂಟಂತೆ. ಆದರೆ ಎಲ್ಲಕ್ಕೂ ಕಾರಣ ಅವರೇ ತಾನೆ?

ಈ ನಿಷ್ಠುರ ಸತ್ಯವನ್ನಾದರೂ ನಾವೇನು ಸಂತೋಷದಿಂದ, ಅಪಹಾಸ್ಯದಿಂದ ಹೇಳಿಲ್ಲ; ತೀವ್ರ ನೋವಿನಿಂದಲೇ ಹೇಳಿದ್ದೇವೆ. ಸಂಬಂಧಪಟ್ಟವರೆಲ್ಲ ಈ ಸತ್ಯವನ್ನು ಮುಖಾ ಮುಖಿ ಎದುರಿಸುವಂತಾಗಬೇಕು; ಆ ಸತ್ಯಕ್ಕೆ ಮುಖ ಕೊಟ್ಟು ನಿಲ್ಲಲಾರದೆ ನಾಚಬೇಕು. ಆಗ ಮಾತ್ರ ಇಂಥ ಜಾತೀಯ ಪುಂಡಾಟಿಕೆಗೆ ಕಡಿವಾಣ ಬೀಳುತ್ತದೆ ಎಂಬುದೇ ನಮ್ಮ ಪ್ರಾಮಾಣಿಕ ಆಶಯ.

ಇದು ಹೇಗೆಂದರೆ, ಒಂದು ಹಳ್ಳಿ ಅಥವಾ ಗ್ರಾಮಕ್ಕೆ 'ಪುಂಡುಗಂದಾಯ' ವಿಧಿಸಿದಂತೆ. ಅಲ್ಲಿನ ಎಲ್ಲರೂ ಪುಂಡರಲ್ಲ; ಶೇಕಡಾ ಎರಡೋ ಮೂರೋ ಜನ ಮಾತ್ರ ಅಂಥವರು ಇರಬಹುದು. ಆದರೆ ಅಷ್ಟೇ ಜನರ ಮಿತಿ ಮೀರಿದ ಸಮಾಜ ವಿರೋಧೀ ಕೃತ್ಯಗಳನ್ನು ತಡೆಯುವ ಶಕ್ತಿ ಉಳಿದವರಿಗೆ ಇರಬೇಕು. ಅದಿಲ್ಲದಾಗ, ಪುಂಡುಗಂದಾಯದ ಅಪಮಾನಕ್ಕಾದರೂ ನಾಚಿ, ಇಡೀ ಊರು ಆ ಪುಂಡರನ್ನು ಹದ್ದುಬಸ್ತಿನಲ್ಲಿಡುತ್ತದೆ.

ಓದುಗರಿಗೆಲ್ಲ ಗೊತ್ತಿರುವಂತೆ ನಮ್ಮ ಪತ್ರಿಕೆಗೆ ಜಾತಿಯ ತಾರತಮ್ಯವಾಗಲಿ, ಸಂಕುಚಿತ ಭಾವನೆಯಾಗಲಿ, ಅಪಹಾಸ್ಯ ಪ್ರವೃತ್ತಿಯಾಗಲಿ ಇಲ್ಲ. ಹರಿಜನರು ಮುಂತಾದ ಎಲ್ಲ ಜಾತಿಗಳ ಜನರೂ ನಮ್ಮವರೇ. ಅವರನ್ನು ಆರ್ಥಿಕವಾಗಿ ದುರ್ಬಲರಾಗಿಯೂ, ಸಾಮಾಜಿಕವಾಗಿ 'ಕೀಳಾಗಿಯೂ' ಇಟ್ಟಿರುವ ನಮ್ಮ ಸಮಾಜದ, ನಮ್ಮ ಪರಂಪರೆಯ ದೋಷಕ್ಕೆ ನಾವೆಲ್ಲ ಭಾಗಿಗಳೆಂಬ ಹೊಣೆಗಾರಿಕೆಯ ಮನೋಭಾವದಿಂದ ಅವರನ್ನೆಲ್ಲ ನಮ್ಮೊಂದಿಗೆ, ನಾವು ಅವರೊಂದಿಗೆ ಬೆರೆತು-ಬೆರೆಯಿಸಿಕೊಂಡು ಬಾಳುವುದಕ್ಕೆ ನಾವೆಲ್ಲ ಸಿದ್ಧರಾಗುವವರೆಗೂ ಈ ದೇಶದಲ್ಲಿ ಶಾಂತಿ, ಸಮೃದ್ಧಿ, ಏಳಿಗೆ ಸಾಧ್ಯವಿಲ್ಲ. ಈ ಅರಿವನ್ನು ಹಂಚುವ ಪ್ರಯತ್ನ ನಮ್ಮದು.

ಈ ಪ್ರಕರಣದಲ್ಲೂ ಈಗಾಗಲೇ ಇಂಥ ಸಮನ್ವಯದ ಪ್ರಯತ್ನಕ್ಕೆ ಹೆಜ್ಜೆ ಇಟ್ಟಿದ್ದೇವೆ. ಇಂಥ ಸಂದರ್ಭದ ದುರುಪಯೋಗ ಪಡೆಯಲು ಹಲವು ವ್ಯಕ್ತಿಗಳು-ಶಕ್ತಿಗಳು ಕಾಯುತ್ತಿರುತ್ತವೆ. ಅವಕ್ಕೆ ಆಸ್ಪದ ಕೊಟ್ಟಿಲ್ಲ. ದಲಿತ ಸಂಘದವರೂ ಅತ್ಯಂತ ಸಂಯಮ, ಅರಿವು ಪ್ರದರ್ಶಿಸಿದ್ದಾರೆಂಬುದನ್ನು ನೀವೆಲ್ಲ ಒಪ್ಪುತ್ತೀರಿ. ಈಗಾಗಲೇ ಈ ತಪ್ಪು ಮಾಡಿದವರಿಗೆ ಅದನ್ನು ತಿಳಿಸಿ ಹೇಳಿ, ಅದನ್ನು ಮುಂದುವರಿಸಿಕೊಂಡು ಹೋಗಬಾರದೆಂದು ಒಳ್ಳೆಯ ಮಾತಿನಲ್ಲೂ, ಕಟ್ಟುನಿಟ್ಟಾಗಿಯೂ ಹೇಳುವ ಪ್ರಯತ್ನ ಕೂಡ ನಡೆದಿದೆ. ಇದಕ್ಕೆ ಎಲ್ಲರ ಸಹೃದಯ ಸಹಕಾರವೂ ಬೇಕಾಗುತ್ತದೆ

ಇಂಥ ಅನಾಗರಿಕ ವರ್ತನೆಯಿಂದ ಅಪಮಾನಕ್ಕೆ ಪಕ್ಕಾಗುವ ಸಂದರ್ಭ ಯಾವ ಜಾತಿಯವರಿಗೂ ಉಂಟಾಗದಂತೆ ಎಲ್ಲರೂ ಕ್ರಮಿಸುತ್ತೀರೆಂಬುದೇ ನಮ್ಮ ನಿರೀಕ್ಷೆ.

—ಸಂಪಾದಕ

ಹೆಲಿಪ್ಯಾಡ್ ಹೆಮ್ಮೆಯ ವಿಷಯವಲ್ಲ

ಮಾನ್ಯರೆ,

ಶೃಂಗೇರಿಯ ಸಮೀಪ ಮೆಣಸೆಯಲ್ಲಿ ಶಾಶ್ವತ ಹೆಲಿಪ್ಯಾಡ್ ನಿರ್ಮಾಣವಾಗಲಿದೆ ಎಂಬ ಸುದ್ದಿ ಕೇಳಿ ಸಖೇದಾಶ್ಚರ್ಯವಾಯಿತು.

ಈ ಹಿಂದೆ ಅನೇಕ ಬಾರಿ ಶೃಂಗೇರಿಗೆ ಹೆಲಿಕಾಪ್ಟರ್‌ನಲ್ಲಿ ಮಹಾ ಮಹಾ ಮಂತ್ರಿ-ಅಧಿಕಾರಿಗಳು ಬಂದಿಲ್ಲ? ಆದರೂ ಶೃಂಗೇರಿ ಎಷ್ಟು ಬದಲಾಗಿದೆ? ಎಷ್ಟು ಅಭಿವೃದ್ಧಿ ಹೊಂದಿದೆ ? ಯಾವನೋ ಒಬ್ಬ ಮಂತ್ರಿ ಹೆಲಿಕಾಪ್ಟರ್‌ನಲ್ಲಿ ಬಂದು, ದೇವಸ್ಥಾನ

(4ನೇ ಪುಟಕ್ಕೆ)

ಬಾಪೂಜಿಯ ಈ ನಾಡಿನಲ್ಲಿ.... !

(2ನೇ ಪುಟದಿಂದ)

ನಮ್ಮ ದೇಶದ ಉದ್ದಿಮೆದಾರರು ವಿದೇಶದ ಉದ್ದಿಮೆದಾರರನ್ನು ಕೂಡಿಕೊಂಡು ಇಲ್ಲಿನ ರೈತರ ಶೋಷಣೆಗೆ ತೊಡಗಿದ್ದಾರೆ. ವಿದೇಶಗಳಲ್ಲಿ ತುಂಬಾ ಅಪಾಯಕಾರಿ ಎಂದು ನಿರ್ಧರಿಸಿ ಬಹಿಷ್ಕರಿಸಿದ ಕೀಟನಾಶಕ, ರಸಗೊಬ್ಬರ ಮುಂತಾದ ವಿಷವನ್ನೆಲ್ಲ ನಮ್ಮ ರೈತರಿಗೆ ಕುಡಿಸಲಾಗುತ್ತಿದೆ ರೈತರು ಬೆವರು ಸುರಿಸಿ ಬೆಳೆಯುವ ಎಲ್ಲಾ ಬೆಳೆಗಳ ಬೆಲೆ ನಿರ್ಧರಿಸುವವರು ಪಟ್ಟಣದ ದಲ್ಲಾಳಿಗಳು ಹಾಗೂ ಸರ್ಕಾರ. ಆದರೆ ಪಟ್ಟಣದ ಕೈಗಾರಿಕಾ ಉತ್ಪನ್ನಗಳ ಬೆಲೆ ನಿಗದಿಪಡಿಸುವವರು ಅದನ್ನು ತಯಾರು ಮಾಡುವ ಉದ್ಯಮಪತಿಗಳೇ ! ರೈತರು ಬೆಳೆಯುವ ಸರಕಿನ ಬೆಲೆ ನಿರ್ಧರಿಸುವಲ್ಲಿ ಯಾವುದೇ ಮಾನದಂಡ ಇಲ್ಲ ರೈತರು ಬೆಳೆದದ್ದನ್ನು ಸುಗ್ಗಿಯ ಕಾಲದಲ್ಲಿ ಅತೀ ಕಡಿಮೆ ಬೆಲೆಗೆ ಕೊಂಡು/ದಾಸ್ತಾನು ಮಾಡಿ ಅತೀ ಹೆಚ್ಚಿನ ಲಾಭಕ್ಕೆ ವರ್ತಕರು, ದಲ್ಲಾಳಿಗಳು ಮಾರಿಕೊಳ್ಳುತ್ತಾರೆ. ಇವೆಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ರೈತರು ಸಂಘಟಿತರಾದರೆ ಆ ಸಂಘಟನೆಯನ್ನೇ ಒಡೆಯಲು ಸರ್ಕಾರ ಹುನ್ನಾರ ನಡೆಸುತ್ತದೆ; ಅವರನ್ನು ಲಾಠಿ, ಬೂಟು, ಗೋಲಿಗಳಿಂದ ಹೊಸಕಿ ಹಾಕಲು ಹೊರಡುತ್ತದೆ. ಹೀಗೆ ಈ ದೇಶದ ಬೆನ್ನೆಲುಬಾಗಿರುವ, ಅನ್ನದಾತನಾಗಿರುವ ರೈತನಿಗೆ ಈ ದೇಶವೇ ನಿಧಾನ ವಿಷವುಣಿಸುವ ವಿಪರ್ಯಾಸವನ್ನು ಕಾಣುತ್ತಿದ್ದೇವೆ.

"ಪಾನ ನಿಷೇಧ ರಾಷ್ಟ್ರೀಯ ನೀತಿಯಾಗಬೇಕು" ಎಂಬುದು ಗಾಂಧೀಜಿಯವರ ಅಭಿಲಾಷೆಯಾಗಿತ್ತು, ಕಾರ್ಯಕ್ರಮವಾಗಿತ್ತು. ಆದರೆ ಇಂದು ಸರ್ಕಾರಗಳೇ ಗಲ್ಲಿ ಗಲ್ಲಿಗಳಲ್ಲಿ ಹೆಂಡ, ಸಾರಾಯಿ ಅಂಗಡಿಗಳನ್ನು ತೆರೆಯುತ್ತಾ ಹೆಚ್ಚು ಹೆಚ್ಚು ಜನರನ್ನು ಕುಡುಕರನ್ನಾಗಿ ಮಾಡುವಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿದೆ. ಸರ್ಕಾರದ ಬೊಕ್ಕಸಕ್ಕೆ ಕೋಟಿಗಟ್ಟಲೆ ಹಣ ಸಿಗುತ್ತದೆಂಬ ಏಕಮಾತ್ರ ದುರಾಸೆಯಿಂದ ಜನರ ಚಾರಿತ್ರ್ಯ, ಬದುಕು ಎರಡನ್ನೂ ನಾಶ ಮಾಡಲೂ ಸಹ ಸರ್ಕಾರಗಳು ಹೇಸುತ್ತಿಲ್ಲ. ಶಾಲಾ ಕಾಲೇಜುಗಳ ಹತ್ತಿರವೇ ಮದ್ಯದ ಅಂಗಡಿಗಳನ್ನು ತೆರೆಯುತ್ತವೆ. ಕುಡಿತ 'ರಾಷ್ಟ್ರೀಯ ಘ್ಯಾಷನ್' ಆಗಿಬಿಟ್ಟಿದೆ !

ಈ ವರ್ಷದ ಸ್ವಾತಂತ್ರ್ಯ ದಿನದಂದು ಡಾ|| ಶಿವರಾಮ ಕಾರಂತರ ನೇತೃತ್ವದಲ್ಲಿ ದಾವಣಗೆರೆಯಲ್ಲಿ ಹತ್ತು ಸಾವಿರ ಮಂದಿ ನಡೆಸಿದ ಪಾನನಿಷೇಧ ಆಂದೋಳನ-ಪಾದಯಾತ್ರೆ ಹಾಗೂ ತರಳಬಾಳು ಸ್ವಾಮೀಜಿಯವರಂಥ ಒಬ್ಬ 'ಜಗದ್ಗುರುಗಳು' ಕೂಡ ಪಾನ ನಿಷೇಧ ಚಳುವಳಿಗೆ ದೊಡ್ಡ ರೀತಿಯಲ್ಲಿ ಧುಮುಕಿರುವುದು ಈ ಪಿಡುಗಿನ ಅಗಾಧತೆ ಮತ್ತು ಸರ್ವ ವ್ಯಾಪ್ತಿ ಎಂಥ ಮಟ್ಟ ಮುಟ್ಟಿದೆಯೆಂಬುದಕ್ಕೊಂದು ನಿದರ್ಶನವಾಗಬಹುದು.

ಒಟ್ಟಿನಲ್ಲಿ, ನೈತಿಕವಾಗಿ ಭಾರತದ ಸಂಪೂರ್ಣ ಅಧಃಪತನ ಸನ್ನಿಹಿತವಾಗುತ್ತಿರುವಂತಿದೆ. ಆದರೆ ಹೀಗೆ ಹೆಜ್ಜೆ ಹೆಜ್ಜೆಗೆ, ನಿಮಿಷ-ನಿಮಿಷಕ್ಕೆ ಎದುರಾಗುವ ಈ ವಿನಾಶ ಪರತೆಯನ್ನು ಕಂಡು ಹತಾಶರಾದರೆ ನಮ್ಮ ಬದುಕಿಗೆ ಅರ್ಥವಿಲ್ಲ. ಗಾಂಧೀಜಿಯವರ ತತ್ವಾದರ್ಶಗಳನ್ನು ಕೇವಲ ಜಪಿಸುತ್ತಾ ಕುಳಿತುಕೊಳ್ಳದೆ, ಅವುಗಳ ಅನುಷ್ಠಾನದತ್ತ ನಮ್ಮ ಪ್ರಯತ್ನ ಸಾಗಬೇಕು. ಮಾತು ಕೃತಿಗಿಳಿಯಬೇಕು. ಆಗ ಮಾತ್ರ ಗಾಂಧೀಜಿಯ ಈ ನಾಡಿನಲ್ಲಿ ನಾವು ಹುಟ್ಟಿದ್ದು ಸಾರ್ಥಕವೆನ್ನಿಸೀತು. ಅಲ್ಲಿಯವರೆಗೆ 'ಗಾಂಧೀ ಜಯಂತಿ'ಯಂಥ ಎಲ್ಲಾ ಆಚರಣೆಗಳೂ ಕೇವಲ ನಮ್ಮ ಅಪ್ರಾಮಾಣಿಕತೆಯನ್ನು ಮುಚ್ಚುವ ಅಲಂಕಾರಿಕ ಪ್ರದರ್ಶನಗಳು ಮಾತ್ರ ಆಗುತ್ತವೆ ಅಷ್ಟೇ.

(ವಿವಿಧ ಮೂಲಗಳಿಂದ)

ದಲಿತ ವಿದ್ಯಾರ್ಥಿ ಒಕ್ಕೂಟದ ಜಿಲ್ಲಾ ಪದಾಧಿಕಾರಿಗಳು

ಚಿಕ್ಕಮಗಳೂರು : 1989-90ನೇ ಸಾಲಿಗೆ ಕರ್ನಾಟಕ ದಲಿತ ವಿದ್ಯಾರ್ಥಿ ಒಕ್ಕೂಟದ ಜಿಲ್ಲಾ ಸಮಿತಿಗೆ ಈ ಕೆಳಕಂಡ ಪದಾಧಿಕಾರಿಗಳು ಆಯ್ಕೆಯಾಗಿದ್ದಾರೆ: ಶಂಕರ್, ದ್ವಿತೀಯ ಬಿ.ಎ (ಸಂಚಾಲಕ), ಭೈರೇಶ್, ಪ್ರಥಮ ಬಿ.ಎ. (ಸಂಘಟನಾ ಸಂಚಾಲಕ), ಬಿ.ಎಸ್ ರಾಮಯ್ಯ, ಪ್ರಥಮ ಬಿ.ಎ., (ಖಜಾಂಚಿ), ವೆಂಕಟರಮಣ, ಪ್ರಥಮ ಬಿ.ಎ. (ಶಿಸ್ತಿನ ನಾಯಕ), ಕುಮಾರಸ್ವಾಮಿ, ಪ್ರಥಮ ಬಿ.ಎ. (ಕಲಾ ಮಂಡಳಿ ಸಂಚಾಲಕ.) (ಎಲ್ಲರೂ ಐ. ಡಿ. ಎಸ್. ಜಿ. ಕಾಲೇಜಿನ ವಿದ್ಯಾರ್ಥಿಗಳು)

ಈ ಸಂದರ್ಭದಲ್ಲಿ ಚುನಾವಣಾಧಿಕಾರಿಯಾಗಿದ್ದ ಬಿ.ಎಂ. ಪುಟ್ಟಯ್ಯ ಮಾತನಾಡಿ, ಈ ವಿದ್ಯಾರ್ಥಿ ಸಂಘಟನೆಯು ಕೇವಲ ಶೈಕ್ಷಣಿಕ ಸಮಸ್ಯೆಗಳಿಗೆ ಮಾತ್ರ ಸೀಮಿತವಾಗದೆ, ಪ್ರಸ್ತುತ ಸಾಮಾಜಿಕ, ರಾಜಕೀಯ ಸಮಸ್ಯೆಗಳಿಗೂ ಸ್ಪಂದಿಸಬೇಕು. ಯಾವುದೇ ರಾಜಕೀಯ ಪಕ್ಷದಿಂದ ದೂರವಿದ್ದು ರಚನಾತ್ಮಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಪ್ರಗತಿಯತ್ತ ಮುನ್ನಡೆಯಬೇಕು ನಮ್ಮನ್ನು ತುಳಿಯುವ, ಹತ್ತಿಕ್ಕುವ ಯಾವುದೇ ಶಕ್ತಿಯ ವಿರುದ್ಧ ಸಂಘಟಿತರಾಗಿ ಸಿಡಿದೆದ್ದು ಹೋರಾಟ ನಡೆಸಬೇಕು ಎಂದರು.

ಎಂ ರಮೇಶ್ ಸ್ವಾಗತಿಸಿ, ಬಿ. ಪಿ. ಮಂಜುನಾಥ್ ವಂದಿಸಿದರು.

ಕರಿಮನೆ ಕೃಷಿ ಸಹಕಾರಿ ಬ್ಯಾಂಕಿನಿಂದ 58 ಲಕ್ಷ ರೂ. ದಾಖಲೆ ಸಾಲ ನೀಡಿಕೆ

ಲೋಕನಾಥಪುರ : ಇಲ್ಲಿನ ಶ್ರೀ ರಾಮು ಸೇವಾ ಪ್ರಾ. ಸ. ಕೃ. ಗ್ರಾ. ಅ. ಬ್ಯಾಂಕ್ ಕಳೆದ ಸಾಲಿನಲ್ಲಿ (1988-89) ಹಿಂದಿನ ಎಲ್ಲ ದಾಖಲೆಗಳನ್ನೂ ಮೀರಿ 327 ಜನ ಸದಸ್ಯರಿಗೆ 58 ಲಕ್ಷ ರೂ.ಗಳನ್ನು ವಿತರಿಸಿದೆ

ಪತ್ರಿಕಾ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿರುವ ಬ್ಯಾಂಕಿನ ಅಧ್ಯಕ್ಷ ಬಿ. ಎಂ ಸುಧಾನಂದ ಮತ್ತು ಕಾರ್ಯದರ್ಶಿ ಡಿ. ಎ. ಕೇಶವಮೂರ್ತಿ, ಇದೇ ಸಾಲಿನಲ್ಲಿ ಶೇ. 92ರ ವಸೂಲಾತಿ ಸಾಧಿಸಿರುವ ಬ್ಯಾಂಕು, ರಾಜ್ಯ ಮಟ್ಟದ 2ನೇ ಸ್ಥಾನ ಉಳಿಸಿಕೊಂಡಿದೆ ಎಂದಿದ್ದಾರೆ.

ಕಳೆದ ವರ್ಷ ಒಟ್ಟು 1002 ಸದಸ್ಯರು 4 ಲಕ್ಷ 95 ಸಾವಿರ ರೂ.ಗಳ ಬಡ್ಡಿ ರಿಯಾಯ್ತಿ ಪಡೆದಿದ್ದು, ಕಳೆದೆರಡು ವರ್ಷಗಳ ಲಾಭಾಂಶವಾಗಿ ಶೇ 18ರ ಶೇರು ನಫೆಹಂಚಲು ಮುಂದಿನ ಸರ್ವ ಸದಸ್ಯರ ಸಭೆಯಲ್ಲಿ ಒಪ್ಪಿಗೆ ಪಡೆಯಲಾಗುವುದು ಎಂದಿದ್ದಾರೆ.

ಬ್ಯಾಂಕು ಚಾಲ್ತಿ ಸಾಲಿನಲ್ಲಿ ಅತಿ ಹೆಚ್ಚು ಸಾಲ ನೀಡುವ ಗುರಿ ಹೊಂದಿದ್ದು, ಎರಡು ಹೊಸ ಯೋಜನೆಗಳನ್ನೂ ಜಾರಿಗೊಳಿಸಲಾಗುತ್ತಿದೆ. ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕ್ ನೆರವಿನ 'ಗ್ರಾಮೀಣ ಗೃಹ ಸಂಪದ' ಯೋಜನೆಯಲ್ಲಿ, ಗ್ರಾಮೀಣ ಪ್ರದೇಶದಲ್ಲಿ ವಾಸಕ್ಕೆ ಯೋಗ್ಯವಾದ ಮನೆಯನ್ನು ಹೊಂದಿರದ ರೈತರ ಮನೆಗಳ ನಿರ್ಮಾಣ, ಖರೀದಿ, ರಿಪೇರಿ ಅಥವಾ ನವೀಕರಣಕ್ಕೆ ಸಾಲ ನೀಡಲಾಗುವುದು. ಅಂತೆಯೇ ಖುಷ್ಕಿ ಜಮೀನಿನಲ್ಲಿ ರಬ್ಬರ್ ಬೆಳೆಯಲ್ಲೂ ಆರ್ಥಿಕ ನೆರವು ನೀಡಲಾಗುವುದು. ಸದಸ್ಯರು ಈ ಎಲ್ಲ ಯೋಜನೆಗಳ ಪ್ರಯೋಜನ ಪಡೆದುಕೊಳ್ಳಬೇಕೆಂದೂ ಬ್ಯಾಂಕ್ ಮನವಿ ಮಾಡಿದೆ.

ಅ. 8ರಿಂದ 3 ದಿನ ಅಂಗನವಾಡಿ ನೌಕರರ ಮುಷ್ಕರ

ಚಿಕ್ಕಮಗಳೂರು: ಅಂಗನವಾಡಿ ನೌಕರರ ಬೇಡಿಕೆಗಳ ಬಗ್ಗೆ ಕೇಂದ್ರ, ರಾಜ್ಯ ಸರ್ಕಾರಗಳ ಗಮನ ಸೆಳೆಯಲು ಅ. 8ರಿಂದ 3 ದಿನಗಳ ಕಾಲ ಜಿಲ್ಲಾ ಪರಿಷತ್ ಮುಂದೆ ಸರದಿ ಉಪವಾಸ ಮುಷ್ಕರ ನಡೆಯಲಿದೆ ಎಂದು ಸಂಘದ ಅಧ್ಯಕ್ಷೆ ರಾಧಾ ಸುಂದರೇಶ್ ತಿಳಿಸಿದ್ದಾರೆ.

ಕಾಫಿ ಬಿತ್ತನೆ ಬೀಜಕ್ಕೆ ಅರ್ಜಿ ಆಹ್ವಾನ

ಚಿಕ್ಕಮಗಳೂರು: ಸುಧಾರಿತ ಕಾಫಿ ತಳಿಗಳ ಬಿತ್ತನೆ ಬೀಜ ಸರಬರಾಜಿಗಾಗಿ ಬೆಳೆಗಾರರು ನಿಯಮಿತ ಅರ್ಜಿ ನಮೂನೆಯಲ್ಲಿ ಪ್ರತಿ ಕಿಲೋಗೆ 35 ರೂ.ಗಳಂತೆ ಮುಂಗಡ ಹಣದೊಂದಿಗೆ, ತಮ್ಮ ಕ್ಷೇತ್ರದ ಕಾಫಿ ಮಂಡಳಿಯ ವಿಸ್ತರಣಾಧಿಕಾರಿಗಳ ಕಛೇರಿಯಲ್ಲಿ ತಾ. 31.10.1389ರ ಒಳಗಾಗಿ ಸಲ್ಲಿಸಬೇಕೆಂದು ಕಾಫಿ ಮಂಡಳಿ ಉಪ ನಿರ್ದೇಶಕರ ಪ್ರಕಟಣೆ ತಿಳಿಸಿದೆ.

ಶೃಂಗೇರಿ ಕಾಲೇಜಿನ ಕಲಾ ಸಂಘ ಉದ್ಘಾಟನೆ

ಶೃಂಗೇರಿ : ಇಲ್ಲಿನ ಜೆ. ಸಿ. ಬಿ. ಎಂ. ಕಾಲೇಜಿನ ಕಲಾ ಸಂಘವನ್ನು ಪ್ರಿನ್ಸಿಪಾಲ್ ಪ್ರೊ|| ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ, ಕುವೆಂಪು ವಿ.ವಿ. ಕನ್ನಡ ವಿಭಾಗದ ಮುಖ್ಯಸ್ಥರಾದ ಎಚ್. ಜೆ. ಲಕ್ಕಪ್ಪಗೌಡರು ಉದ್ಘಾಟಿಸಿದರು. ಕಲಾ ಸಂಘದ ಅಧ್ಯಕ್ಷ ಸುರೇಂದ್ರ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ವಿವಿಧ ಮನರಂಜನಾ ಕಾರ್ಯಕ್ರಮಗಳು ನಡೆದವು. ಶಿವಶಂಕರ್ ಸ್ವಾಗತಿಸಿ, ಶಶಿಕಲ ವಂದಿಸಿದರು.

ಬೀಳ್ಕೊಡುಗೆ

ಇಲ್ಲಿನ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ 2 ವರ್ಷ ಸಂಸ್ಕೃತ ಅಧ್ಯಾಪಕರಾಗಿ ದುಡಿದು, ಇದೀಗ ಕೇಂದ್ರ ಸರ್ಕಾರದ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯ ಉದ್ಯೋಗದ ನಿಮಿತ್ತ ತೆರಳಿದ ಜಿ. ವಿ. ಕಲ್ಲಾಪುರ ಇವರನ್ನು ಕಾಲೇಜಿನ ಸಂಸ್ಕೃತ ವಿಭಾಗದ ವಿದ್ಯಾರ್ಥಿಗಳು ಈಚಿಗೆ ಆತ್ಮೀಯವಾಗಿ ಬೀಳ್ಕೊಟ್ಟರು ಅಧ್ಯಕ್ಷತೆ ವಹಿಸಿದ್ದ ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಟಿ ಎಸ್. ವೆಂಕಣ್ಣಯ್ಯನವರು ವಿದ್ಯಾರ್ಥಿಗಳ ಪರವಾಗಿ ನೆನಪಿನ ಕಾಣಿಕೆಯನ್ನು ನೀಡಿದರು.

ಸತ್ಯನಾರಾಯಣ ಸ್ವಾಗತಿಸಿ, ಮುರಳಿ ವಂದಿಸಿದರು. ಪ್ರಶಾಂತ್ ಕಾರ್ಯಕ್ರಮ ನಿರ್ವಹಿಸಿದರು. (ವರದಿ:ವೈ.ಗ ಜಗದೀಶ್)

'ಮುಂಜಾವು' ಪರಿಷ್ಕೃತ ಚಂದಾ ದರ :
ವಾರ್ಷಿಕ ಚಂದಾ: ರೂ 35
ಬಿಡಿ ಪ್ರತಿ : 0-60 ಪೈಸೆ.
ಓದುಗರು ಸಹಕರಿಸಬೇಕಾಗಿ ವಿನಂತಿ. —ಸಂ.

ಮಹಿಳೆಯರಿಗೆ ಸಂಸ್ಕೃತ ಸಂಭಾಷಣೆ ಶಿಬಿರ

ಹರಿಹರಪುರ : ಸಂಸ್ಕೃತ ಪುರಾತನ ಭಾಷೆಯಾಗಿದ್ದರೂ ಕಂಪ್ಯೂಟರ್‌ನಲ್ಲಿ ಕೂಡ ಬಳಕೆಗೆ ಸೂಕ್ತವಾಗಿದೆ ಎಂದು ಪಾಶ್ಚಾತ್ಯರೇ ದೃಢೀಕರಿಸುತ್ತಿದ್ದು, ಅವರೂ ಆ ಭಾಷೆ ಕಲಿಯಲು ಇಷ್ಟ ಪಡುತ್ತಿರುವಾಗ ನಮಗೆ ಜ್ಞಾನೋದಯವಾಗದಿರುವುದು ವಿಷಾದಕರ ಎಂದು ಇಲ್ಲಿ ಮಹಿಳೆಯರಿಗಾಗಿ ಏರ್ಪಡಿಸಲಾದ ಸಂಸ್ಕೃತ ಸಂಭಾಷಣಾ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಹಿಂದೂ ಸೇವಾ ಪ್ರತಿಷ್ಠಾನದ ಅನಂತ ಹೆಬ್ಬಾರ್ ನುಡಿದರು

ಇದಕ್ಕೆ ಮೊದಲು ಸೆ. 21ರಂದು ನಿಧನರಾದ ವಿದ್ಯಾತೀರ್ಥ ಸ್ವಾಮಿಗಳ ಸೇವಾ ಕಾರ್ಯಗಳನ್ನು ಸ್ಮರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

'ಶತಮಾನದ ತಿರುವಿನಲ್ಲಿ ಭಾರತ' ಪುಸ್ತಕ ಬಿಡುಗಡೆ

ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್‌ನ ಹೊಸ ಪ್ರಕಟಣೆಯಾದ 'ಶತಮಾನದ ತಿರುವಿನಲ್ಲಿ ಭಾರತ' ಪುಸ್ತಕವನ್ನು ಜಿಲ್ಲಾ ಸಂಚಾಲಕ ಕ.ರಾ. ಶಿವಸ್ವಾಮಿ ಪರಿಚಯಿಸಿದರು. ಈ ಎಲ್ಲಾ ಸಭೆಗಳಿಗೆ ಬಳಗದ ಅಧ್ಯಕ್ಷ ಮಾಧವ ಕಲ್ಕೂರ್ ಅಧ್ಯಕ್ಷತೆ ವಹಿಸಿದ್ದು ಬಳಗದ ಉಪಾಧ್ಯಕ್ಷೆ ಶ್ರೀಮತಿ ಸರಸ್ವತಮ್ಮ ಶ್ರೀಧರ್ ಭಟ್ ಇವರು ಪುಸ್ತಕ ಬಿಡುಗಡೆ ಹಾಗೂ ಸಂಸ್ಕೃತ ಶಿಬಿರದ ಉದ್ಘಾಟನೆ ಮಾಡಿದರು

ಸ್ಥಳೀಯ ಪ್ರಬೋಧಿನಿ ಸಂಸ್ಥೆಯು ಸಹಕಾರದಲ್ಲಿ ಹರಿಹರಪುರವನ್ನು ಮತ್ತೂರು, [illegible]ರುಗಳಂತೆ ಇನ್ನೊಂದು 'ಸಂಸ್ಕೃತ ಪು[illegible]ವನ್ನಾಗಿಸುವ ಮಹದುದ್ದೇಶದ ಬಗ್ಗೆ ಬಳಗದ ಸಂಚಾಲಕ ಎಚ್. ಎನ್. ನಾಗರಾಜ್ ಸಭೆಗೆ ಪರಿಚಯಿಸಿದರು.

(ವರದಿ : ಜೆ ಆರ್.ಎಸ್. ಪ್ರಕಾಶ್)

ಹೆಲಿಪ್ಯಾಡ್ ಹೆಮ್ಮೆಯ ವಿಷಯವಲ್ಲ

(3ನೇ ಪುಟದಿಂದ)

ವನ್ನು ನೋಡಿ ಒಂದು ಒಣ ಭಾಷಣ ಬಿಗಿದು, ಕೆಲಸಕ್ಕೆ ಬಾರದ ಪೊಳ್ಳು ಆಶ್ವಾಸನೆಗಳನ್ನ ಕೊಟ್ಟು ಹೋಗುವುದಕ್ಕೆ, ನಮ್ಮದೇ ಆದ ಎಷ್ಟೋ ಲಕ್ಷ ರೂಪಾಯಿಗಳನ್ನು ಹುಡಿಗಟ್ಟಲು ಸರ್ಕಾರ ಮುಂದಾಗಿದೆ.

ಅಂತಹ 'ವಿಐಪಿ' ವ್ಯಕ್ತಿಯೊಬ್ಬ ಬಂದರೆ ಜನಜೀವನವೇ ಅಸ್ತವ್ಯಸ್ತವಾಗುವುದು. ಪೋಲೀಸರಿಗಂತೂ, ಮಾಡಿ ಪೂರೈಸಲಾಗದಷ್ಟು ಹೊರೆ, ಜವಾಬ್ದಾರಿ. ಹಿರಿಯ ಪೋಲೀಸ್ ಅಧಿಕಾರಿಗಳಿಂದ ಹಿಡಿದು ಕಾನ್‌ಸ್ಟೇಬಲ್‌ವರೆಗೆ, 500ರಿಂದ 600 ಜನ ಪೋಲೀಸರುಗಳೂ ಕಾವಲಿರಬೇಕು. ಅವರಿಗೆ ಊಟ, ವಸತಿ, ಸಂಬಳ, ಭತ್ಯ, ಇದಕ್ಕೆಲ್ಲ ಎಷ್ಟು ಖರ್ಚು ? ಆ ಮಂತ್ರಿ-ಮಹೋದಯ ಹೆಲಿಪ್ಯಾಡ್‌ನಿಂದ ದೇವಸ್ಥಾನಕ್ಕೆ ಬರಲು ಬೆಂಗಳೂರಿನಿಂದಲೇ ಕಾರು ಬರಬೇಕು ! ಅದೇ ಕಾರಿನಲ್ಲಿ ಅಲ್ಲಿಂದಲೇ ಆತ ಬರಬಾರದೇಕೆ ? ಇದನ್ನೆಲ್ಲ ಯಾರೂ ಕೇಳುವಂತಿಲ್ಲ, ಕೇಳುತ್ತಿಲ್ಲ.

ಈ ವ್ಯಕ್ತಿಗಳು ಶೃಂಗೇರಿಯನ್ನು ನೋಡದಿದ್ದರೆ ಯಾವ ಹಾನಿಯೂ ಆಗುವುದಿಲ್ಲ. ಅದೇ ಹೆಲಿಪ್ಯಾಡ್ ನಿರ್ಮಾಣಕ್ಕೆ ವೆಚ್ಚವಾಗುವ ಹಣವನ್ನೇ ಅಭಿವೃದ್ಧಿ ಕಾರ್ಯಗಳಿಗೆ ಬಳಸಿದ್ದರೆ, ಮನೆಯಿಲ್ಲದ ಎಷ್ಟೋ ಜನರಿಗೆ ಮನೆಗಳನ್ನು ಕಟ್ಟಿಕೊಡಬಹುದಿತ್ತು; ಕೆಲವು ಹಳ್ಳಿಗಳಿಗೆ ರಸ್ತೆಯನ್ನೋ ವಿದ್ಯುತ್ ಸೌಕರ್ಯವನ್ನೋ ಒದಗಿಸಬಹುದಿತ್ತು; ಅಥವಾ ಅದೇ ಹಣದಲ್ಲಿ ಶೃಂಗೇರಿಗೆ ಅತ್ಯಗತ್ಯವಾಗಿ ಬೇಕಾದ ಬಸ್ ನಿಲ್ದಾಣ ನಿರ್ಮಿಸಬಹುದಿತ್ತು; ಅಥವಾ ಹಳ್ಳಿಯ ಮೂಲೆಯಲ್ಲಿ ಶಾಲೆಯನ್ನೋ ಆಸ್ಪತ್ರೆಯನ್ನೋ ಕಾಲೇಜನ್ನೋ ತೆರೆಯಬಹುದಿತ್ತು. ಈ ಯಾವ ಯೋಜನೆಗಳಿಗೂ ಸರ್ಕಾರದ ಬಳಿ ಇಲ್ಲದ ಹಣ ಇಂಥ ವಿಐಪಿ ದರ್ಬಾರಿಗೆ ಎಷ್ಟು ಬೇಕಾದರೂ ಒದಗುತ್ತದಲ್ಲ !?

ಈ ಎಲ್ಲಾ ಕೆಲಸಗಳು ಒಮ್ಮೆಲೇ ಆಗಿಬಿಟ್ಟರೆ ಮುಂದೆ ಬರುವ ಮಂತ್ರಿಗಳಿಗೆ ಆಶ್ವಾಸನೆ ಕೊಡಲಿಕ್ಕೆ ಯಾವ ವಿಷಯವೂ ಇಲ್ಲವಾಗಿಬಿಡುತ್ತದಲ್ಲ ಎನ್ನೋಣವೆ ?

ಇದನ್ನೆಲ್ಲ ವಿರೋಧಿಸುವವರು ಯಾರು ? ಜನ ವಿರೋಧಿಸದೆ "ನಮ್ಮ ಊರಿನಲ್ಲಿ ಹೆಲಿಪ್ಯಾಡ್ ಆಗುತ್ತದೆ" ಎಂದು ಹೆಮ್ಮೆಯಿಂದ ಬೀಗುವುದಾದರೆ, ನಮ್ಮ ಊರಿನಲ್ಲಿ ಪೋಲೀಸ್ ಸ್ಟೇಷನ್ ಇದೆ ಎಂದೂ ಹೇಳಿಕೊಳ್ಳಿ. ಆದರೆ ಸ್ವಲ್ಪ ಯೋಚಿಸಿ.

—ವೆಂ. ಪ್ರಸನ್ನ, ಕಿಗ್ಗ.

ಸಂಪಾದಕ, ಮುದ್ರಕ, ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್; ಅಚ್ಚು : ದೀವಟಿಗೆ ಅಚ್ಚು ಕೂಟ,